# ಲಿಯೋನಿಲ್ಲಾ ಸಿನಿಮಾ ಪುಟಗಳು!

‘ಖಾಸಗಿ ಪುಟಗಳು’ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಿತರಾಗಿದ್ದ ನಟಿ ಲಿಯೋನಿಲ್ಲಾ ಶ್ವೇತಾ ಡಿಸೋಜಾ ಅವರು ಐಟಿ ಕ್ಷೇತ್ರದಿಂದ ಸಿನಿಮಾದೆಡೆಗೆ ಬಂದವರು. ಇದೀಗ ಮತ್ತಷ್ಟು ಸಿನಿಮಾಗಳು ಅವರ ಪಾಲಿಗೆ ಒಲಿದು ಬಂದಿದ್ದು, ಈ ಸಿನಿಮಾಗಳು ತಮಗೊಂದು ಅಸ್ಮಿತೆ ರೂಪಿಸುವ ಭರವಸೆ ಅವರಲ್ಲಿದೆ.

■ ಸುಮಲತಾ ಎನ್



‘ಖಾಸಗಿ ಪುಟಗಳು’ ಸಿನಿಮಾ ಮೂಲಕ ಚಂದನವನಕ್ಕೆ ಪರಿಚಿತರಾದವರು ನಟಿ ಲಿಯೋನಿಲ್ಲಾ ಶ್ವೇತಾ ಡಿಸೋಜಾ. ಇದಕ್ಕೂ ಮುನ್ನ ಹಿಂದಿಯ ‘ವೈ’ ಸಿನಿಮಾದಲ್ಲಿ ನಟಿಸಿದ್ದ ಅವರಲ್ಲಿ ನಟಿಯಾಗಬೇಕೆಂಬ ಅಪೇಕ್ಷೆಯೇನೂ ಗಟ್ಟಿಯಾಗಿರಲಿಲ್ಲ. ಆದರೆ ಕಿರುಚಿತ್ರವೊಂದರಲ್ಲಿ ನಟಿಸುವ ಅವಕಾಶದ ನೆಪವೊಂದು ನಟನೆಯೆಡೆಗೆ ಸಣ್ಣ ಸೆಳೆತವನ್ನು ಉಂಟುಮಾಡಿತ್ತು. ಈಗ ಆ ಸೆಳೆತವೇ ಅವರನ್ನು ಸಿನಿಮಾರಂಗದತ್ತ ಆಕರ್ಷಿತರಾಗುವಂತೆ ಮಾಡಿದೆ.

ಸದ್ಯ ಕನ್ನಡದ್ದೇ ನಾಲ್ಕೈದು ಸಿನಿಮಾಗಳಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದು, ಈಚೆಗೆ ಅವರ ಅಭಿನಯದ ‘ಹೆಜ್ಜಾರು’ ಸಿನಿಮಾ ಬಿಡುಗಡೆ ಕಂಡಿದೆ.

ಮೂಲತಃ ಮಂಗಳೂರಿನವರಾದ ಲಿಯೋನಿಲ್ಲಾ, ಪದವಿ ನಂತರ ಬೆಂಗಳೂರಿಗೆ ಎಂಜಿನಿಯರಿಂಗ್ ಕಲಿಯಲು ಬಂದವರು. ಓದು ಮುಗಿಸಿ ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್ ಕೂಡ ಆದರು. ಅದೇ ಸಮಯದಲ್ಲಿ ಸ್ನೇಹಿತರೊಬ್ಬರು ಕಿರುಚಿತ್ರವೊಂದರಲ್ಲಿ ನಟಿಸುವಂತೆ ಕೇಳಿದರು. ಆ ಕಿರುಚಿತ್ರಕ್ಕೆ ಜನರಿಂದ ಬಂದ ಉತ್ತಮ ಸ್ಪಂದನೆ ನಟನೆಯಲ್ಲಿ ಪ್ರಯತ್ನ ಮುಂದುವರೆಸುವಂತೆ ಅವರಲ್ಲಿ ಪ್ರೇರಣೆಯನ್ನೂ ತುಂಬಿತ್ತು.

ನಟನೆಯನ್ನು ವೃತ್ತಿಪರವಾಗಿ ಕಲಿತಿಲ್ಲದಿದ್ದರೂ ಪ್ರಯತ್ನವೆಂಬಂತೆ ಆಡಿಷನ್‌ಗಳಲ್ಲಿ ತೊಡಗಿಕೊಂಡಿದ್ದ ಅವರಿಗೆ ಹಿಂದಿಯ ‘ವೈ’ ಸಿನಿಮಾದಲ್ಲಿ ನಟಿಸುವ ಅವಕಾಶ ದೊರೆಯಿತು. ಅದೇ ಸಮಯದಲ್ಲಿ ನಿರ್ದೇಶಕ ರಾಜ್ ಬಿ. ಶೆಟ್ಟಿ ಅವರ ತಂಡದ ಆಡಿಷನ್ ಒಂದರಲ್ಲಿ ಪಾಲ್ಗೊಂಡಿದ್ದಾಗ, ವರ್ಕ್‌ಶಾಪ್‌ನಲ್ಲಿ ಭಾಗವಹಿಸಿ ಸಿನಿಮಾರಂಗದ ಕುರಿತ ಹಲವು ವಿಷಯಗಳನ್ನು ಅರಿತುಕೊಳ್ಳುವ ಅವಕಾಶವೂ ದೊರೆಯಿತು.

ನಟನೆಯನ್ನು ಪೂರ್ಣ ಪ್ರಮಾಣದಲ್ಲಿ ಪರಿಗಣಿಸಿ ಪ್ರಯತ್ನ ಮುಂದುವರೆಸಿದ ಲಿಯೋನಿಲ್ಲಾ ಅವರಿಗೆ ಚಂದನವನದ ಬಾಗಿಲು ತೆರೆದಿದ್ದು ‘ಖಾಸಗಿ ಪುಟಗಳು’ ಸಿನಿಮಾ.

‘‘ಖಾಸಗಿ ಪುಟಗಳು’ ಕನ್ನಡದಲ್ಲಿ ನನ್ನ ಮೊದಲ ಸಿನಿಮಾ. ಅದರಲ್ಲಿ ವಿದ್ಯಾರ್ಥಿ ಪಾತ್ರ ಮಾಡಿದ್ದೆ. ಆ ಸಿನಿಮಾ ನಂತರ ಪುಟ್ಟ ಬ್ರೇಕ್ ತೆಗೆದುಕೊಂಡಿದ್ದೆ. ಆಮೇಲೆ ‘ಹೆಜ್ಜಾರು’ ಸಿನಿಮಾದಲ್ಲಿ ಅಭಿನಯಿಸಿದೆ. ಅದರಲ್ಲಿನ ‘ಜಾನಕಿ’ ಪಾತ್ರವೂ ಸುಂದರವಾಗಿತ್ತು. ಹೀಗೆ ಒಂದಕ್ಕಿಂತ ಒಂದು ಸುಂದರ, ಭಿನ್ನವಾದ ಪಾತ್ರಗಳನ್ನು ಮಾಡಬೇಕಿದೆ. ಪಾತ್ರಗಳ ಮೇಲೆ ಹೆಚ್ಚು ಗಮನ ನೀಡಬೇಕು ಎನಿಸಿದೆ. ಗ್ಲಾಮರ್ ಮಾತ್ರವಷ್ಟೇ ಅಲ್ಲದೆ ಪಾತ್ರ ಎಷ್ಟು ಪ್ರಭಾವಶಾಲಿ ಎನ್ನುವುದನ್ನೂ ನೋಡುತ್ತೇನೆ. ಬಗೆಬಗೆಯ ಪಾತ್ರಗಳನ್ನು ಎಕ್ಸ್‌ಪ್ಲೋರ್ ಮಾಡಬೇಕೆಂಬ ಆಸೆಯಿದೆ. ಅಂಥ ಪಾತ್ರಕ್ಕಾಗಿ ನಾನು ಕಾಯುತ್ತಿದ್ದೇನೆ ಕೂಡ’’ ಎಂದು ತಮ್ಮ ಕನಸುಗಳನ್ನು ತೆರೆದಿಡುತ್ತಾರೆ.

‘ಹೆಜ್ಜಾರು’ ಬಳಿಕ ‘ನೆಲ್ಸನ್’ ಸಿನಿಮಾದಲ್ಲಿ ನಟ ವಿನೋದ್ ಪ್ರಭಾಕರ್ ಜೊತೆ ಕಾಣಿಸಿಕೊಳ್ಳುತ್ತಿದ್ದಾರೆ. ‘ಗಾಂಧಿ ಸ್ಕ್ವೇರ್’, ರಮೇಶ್ ಇಂದಿರಾ ನಿರ್ದೇಶನದ ಸಿನಿಮಾವೊಂದರಲ್ಲೂ ನಟಿಸುತ್ತಿದ್ದಾರೆ. ಎರಡು ಮೂರು ಕಥೆಗಳನ್ನು ಕೇಳುತ್ತಿದ್ದಾರೆ ಕೂಡ.

‘ಸಿನಿಮಾದಲ್ಲಿ ಅಭಿನಯಿಸುವ ಜೊತೆಗೆ ಸಿನಿಮಾ ಕಟ್ಟುವ ಪ್ರಕ್ರಿಯೆಯನ್ನೂ ಎಂಜಾಯ್ ಮಾಡಬೇಕು’ ಎನ್ನುವ ಅವರಲ್ಲಿ ಹೊಸತನ್ನು ಕಲಿಯುವ ತವಕವೂ ತುಂಬಿದೆ. ■